# ಇದ್ದರೂ ಇಲ್ಲದಂತಾದ ತವರು

ರಾಹುಲ್ ಹುಟ್ಟಿದಾಗ ನಂಗೆ ಕೊಂಚ ನಿರಾಸೆಯೇ ಆಯಿತು. ಇವರ ಶಾಸ್ತ್ರ, ಸಂಪ್ರದಾಯ, ಆಸೆ ಎಲ್ಲಾದಕ್ಕೂ ವ್ಯತಿರಿಕ್ತವಾಗಿ ಹೆಣ್ಣು ಹುಟ್ಟಲಿ ಎಂದು ನನ್ನ ಮನಸ್ಸು ಬಯಸಿತ್ತು. ಆದರೆ ಇವರ ತಾತನಿಗೆ ಕನಕಾಭಿಷೇಕದ ಯೋಗ ಗಟ್ಟಿಯಾಗಿ ಇತ್ತು.

ರಾಹುಲ್‌ಗೆ ಎಂಟು ತಿಂಗಳು ತುಂಬಿದ ಮೇಲೆ ನಮ್ಮ ಮದುವೆಯಾದ ಛತ್ರದಲ್ಲೇ ಭರ್ಜರಿಯಾಗಿ ಕನಕಾಭಿಷೇಕದ ಸಮಾರಂಭ ನಡೆಯಿತು. ಅಜ್ಜಿ, ತಾತ, ಅತ್ತೆ, ಮಾವ, ನಾನು ಇವರು.. ಪುಟ್ಟ ರಾಹುಲ್. ನಾಲ್ಕು ಗಂಡು ತಲೆ ಕಾಣುವುದು ಅಪರೂಪ ಅದು ನಮ್ಮ ಮನೆಯಲ್ಲಿ ಸಂಭವಿಸಿತು..

ರಾಹುಲ್‌ಗೆ ವರ್ಷ ತುಂಬುವ ಹೊತ್ತಿಗೆ ಮತ್ತೆ ಬಸಿರು.. ಈ ಬಾರಿ ಹುಟ್ಟಿದ್ದು ರಾಧಿಕಾ. ಮೂರು ತಲೆಮಾರಿನಿಂದ ಈ ವಂಶ ಕಾಣದ ಹೆಣ್ಣು ಮಗುವಿನ ಜನನ, ಪ್ರತಿಯೊಂದು ಅತಿಶಯವೇ! ಮಗ, ಮಗಳು, ಮನೆ, ವರ್ಷಗಳು ಉರುಳಿದ್ದು ಗಮನಕ್ಕೇ

